**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 1533/2022 ಸಿಡಬ್ಲೂ: 6 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 23-12-2025

ಹೆಸರು : ಪಾರ್ವತಿ

ಗಂಡ ಹೆಸರು : ಚಂದಪ್ಪ

ವಯಸ್ಸು : 60 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಹಂಗನಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ಮತ್ತು 4 ನನಗೆ ಪರಿಚಯ. ಆರೋಪಿತರು ಸಹ ನನಗೆ ಪರಿಚಯ. ಆರೋಪಿತರ ಮತ್ತು ಚಾ ಸಾ 1 ರವರ ನಡುವೆ ಎಷ್ಟು ವರ್ಷಗಳ ಹಿಂದೆ ಜಗಳ ಆಗಿತ್ತು ನನಗೆ ಗೊತ್ತಿಲ್ಲ. ನಾನು ಆರೋಪಿತರು ಮತ್ತು ಚಾ ಸಾ 1 ರವರ ನಡುವೆ ಆಗಿದೆ ಎನ್ನಲಾದ ತಂಟೆಯನ್ನು ನಾನು ಕಣ್ಣಾರೆ ಕಂಡಿಲ್ಲ ಹಾಗೂ ಯಾವುದೇ ಜಗಳ ಬಿಡಿಸಿಲ್ಲ, ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿಃ21-07-2022 ರಂದು ಬೆಳಿಗ್ಗೆ 10-00 ಗಂಟೆ ಸುಮಾರಿಗೆ ಚಾ ಸಾ 1ರವರು ಜಾಕನಳ್ಳಿ ರವರ ಮನೆಯ ಹತ್ತಿರ ರೋಡಿನ ಮೇಲೆ ನಡೆದುಕೊಂಡು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿತರು ಚಾ ಸಾ 1 ರವರಿಗೆ ತಡೆದು ನಿಲ್ಲಿಸಿ ಹೊಲಕ್ಕೆ ಹೋಗಲು ದಾರಿ ಬಿಟ್ಟಿರುವುದಿಲ್ಲ ಅಂತಾ ಹೇಳಿದ್ದರು ಎಂದರೆ ಗೊತ್ತಿಲ್ಲ. 2 ನೇ ಆರೋಪಿತನು ಚಾ ಸಾ 1ರವರಿಗೆ ಹಿಡಿದುಕೊಂಡಾಗ 1 ನೇ ಆರೋಪಿತನು ಒಂದು ಕಟ್ಟಿಗೆ ಯಿಂದ ಚಾ ಸಾ 1 ರವರ ಬೆನ್ನಿನ ಮೇಲೆ ಹೊಡೆದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 2 ನೇ ಆರೋಪಿತನು ಸಹ ಕೈಯಿಂದ ಚಾ ಸಾ 1 ರವರ ಹೊಟ್ಟೆಗೆ ಹೊಡೆದು ಗುಪ್ತ ಪೆಟ್ಟು ಪಡಿಸಿದನು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಚಾ ಸಾ

5ರವರು  ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಮು ಮಾ 1 ನಾನು ನೋಡಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ಓದಿ ಹೇಳಲಾಯಿತು ಸದರಿ ದಾಖಲಾತಿಯು ಸಾಕ್ಷಿಯ ಹೇಳಿಕೆಯಾಗಿದ್ದು ಸಾಕ್ಷಿಯು ಅದರಲ್ಲಿರುವ ಹೇಳಿಕೆಯನ್ನು ನಿರಾಕರಿಸಿರುತ್ತಾರೆ ಸದರಿ ಹೇಳಿಕೆಯ ಭಾಗವನ್ನು ನಿ ಪಿ 3 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**